ಸ್ಕೀಮ್‌ಗೆ ಸಂಬಂಧಿಸಿದ ಹಾಗೆ ತಮಿಳುನಾಡಿನವರು ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ. ಮತ್ತು ಕರ್ನಾಟಕ ಸರ್ಕಾರದವರು ಈ ಡ್ರಾಫ್ಟ್ ಸ್ಕೀಮ್‌ಗೆ ಸಂಬಂಧಿಸಿದ ಹಾಗೆ ತಮ್ಮ ಕೆಲವು ಅಬ್‌ಸರ್ವೇಶನ್ಸ್ ಮಾಡಿದ್ದಾರೆ. ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ಮತ್ತು ಅದು ಈಗ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. ಮತ್ತು ಕೇರಳ ಸರ್ಕಾರದವರು ಒಂದು ತಿಂಗಳು ಸಮಯ ಬೇಕು ಎಂದು ಕೇಳಿದ್ದಾರೆ. ಈ ಹಂತದಲ್ಲಿದೆ. ಆದುದರಿಂದ ಕೇಂದ್ರಸರ್ಕಾರದವರು ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ ಅನ್ನತಕ್ಕಂಥದ್ದನ್ನು ಹೇಳುವಾಗ ನ್ಯಾಯಮೂರ್ತಿಗಳು ಈಗ ಕೋರ್ಟಿಗೆ ಹೇಳಿದರು, ಯಾವುದೇ ರಾಜ್ಯಸರ್ಕಾರ ಡ್ರಾಫ್ಟ್ ಸ್ಕೀಮ್‌ಗೆ ಸಂಬಂಧಪಟ್ಟ ಹಾಗೆ ಈಗ ಯಾರಾದರೂ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸದೆ ಹೋದರೆ, ಅದಕ್ಕೆ ಆಕ್ಷೇಪಣೆಗಳನ್ನು ಕ್ಲಾಸ್ ಬೈ ಕ್ಲಾಸ್ ಸಂಬಂಧಪಟ್ಟ ರಾಜ್ಯಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ಒದಗಿಸಲಿಕ್ಕೆ ಎರಡು ವಾರಗಳ ಸಮಯವನ್ನು ಯಾವುದೇ ರಾಜ್ಯ ಸರ್ಕಾರಗಳಿಗೆ ಕೊಡುತ್ತಿದೆ. ಆ ಎರಡು ವಾರದ ಒಳಗಡೆ ಡ್ರಾಫ್ಟ್ ಸ್ಕೀಮ್‌ಗೆ ಸಂಬಂಧಪಟ್ಟ ಹಾಗೆ ಆಕ್ಷೇಪಣೆಗಳನ್ನು ಸಲ್ಲಿಸದೇ ಹೋದರೆ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರತಕ್ಕ ಯಾವುದೇ ಮಾಹಿತಿ ಇದ್ದರೆ ಅದನ್ನೇ ಅಂತಿಮ ಎಂದು ತೆಗೆದುಕೊಂಡು, ಕೇಂದ್ರ ಸರ್ಕಾರದವರು ಎರಡು ವಾರದೊಳಗೆ ಅದರ ಬಗ್ಗೆ ಒಂದು ಕ್ರಮ ಕೈಗೊಳ್ಳಬೇಕೆಂದು ನಿನ್ನೆಯ ದಿವಸ ತೀರ್ಮಾನ ಕೊಟ್ಟಿದೆ. ಇದು ಬಂದಾದ ಮೇಲೆ ನಮಗೆ ಐದೂವರೆ ಗಂಟೆಯ ಮೇಲೆ ಗೊತ್ತಾಯ್ತು. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದೆ, ನೀರಾವರಿ ಸಚಿವರು ಇದ್ದರು. ಬೆಳಿಗ್ಗೆ ಸಹ ಇದನ್ನೇ ಚರ್ಚೆ ಮಾಡಿ ಮಾಡಿ ಎರಡು ಸದನದ ಎಲ್ಲಾ ರಾಜಕೀಯ ಪಕ್ಷದ ಮುಖಂಡರನ್ನು ಕರೆದು ನಾಳೆ ಮೂರು ಗಂಟೆಗೆ ಸಭಾದ್ಯಕ್ಷರ ಸಭಾಂಗಣದಲ್ಲಿ ಯಾವ ಕ್ರಮ ಕೈಗೊಳ್ಳಬೇಕು, ಮುಂದೆ ರಾಜ್ಯ ಸರ್ಕಾರ ಯಾವ ನಿಲುವನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೋಸ್ಕರ ಒಂದು ಮೀಟಿಂಗನ್ನು ಕರೆದಿದ್ದೇವೆ. ಬೆಳಿಗ್ಗೆ ವಾಟಾಳ್ ನಾಗರಾಜ್‌ರವರು ಎತ್ತಿರತಕ್ಕ ಪ್ರಶ್ನೆಗೆ ಉತ್ತರ ನೀಡುತ್ತಾ ಸಹ ನೀರಾವರಿ ಸಚಿವರು ಈ ಮಾತನ್ನು ಹೇಳಿದ್ದಾರೆ.

ಗಮನ ಸೆಳೆಯುವ ಸೂಚನೆಗಳು

ವಿಷಯ: (1) ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಖಾಲಿ ಇರುವ ನಿರ್ದೇಶಕರ ಹುದ್ದೆಯನ್ನು ತುಂಬದೆ ಜನರಿಗೆ ತೊಂದರೆ.

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಖಾಲಿ ಇರುವ ನಿರ್ದೇಶಕರ ಹುದ್ದೆಯನ್ನು ಈವರೆವಿಗೂ ತುಂಬದೆ ಇರುವುದರಿಂದ ಸಂಸ್ಥೆಯ ಮೇಲೆ ಉಂಟಾಗಿರುವ ದುಷ್ಪರಿಣಾಮದ ಬಗ್ಗೆ ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಡಾ. ಎಚ್.ಸಿ.ಮಹಾದೇವಪ್ಪ (ಸಚಿವರು): ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಬೆಂಗಳೂರು, ಇದರ ನಿರ್ದೇಶಕರ ಹುದ್ದೆಯು ಡಾ. ಅನಂತ್‌ರವರ ಸೇವಾ ನಿವೃತ್ತಿಯಿಂದ ತೆರವಾಗಿದೆ. ಸದರಿ ಸಂಸ್ಥೆಯ ಬೈಲಾಗಳ ಅನ್ವಯ ಈ ಹುದ್ದೆಯನ್ನು ತುಂಬಲು ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಇಂತಹ ಪ್ರಕಾರ್ಯವನ್ನು ಪ್ರಶ್ನಿಸಿ ಮೇಲ್ಕಂಡ ಸಂಸ್ಥೆಯ ಮೂರು ಜನ ವೈದ್ಯರುಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಸದರಿ ನ್ಯಾಯಾಲಯವು ದಿನಪತ್ರಿಕೆಗಳಲ್ಲಿ ಹೊರಡಿಸಿದ ಪ್ರಕಟಣೆಯ ಮೂಲಕ ಸರ್ಕಾರವು ತೆಗೆದುಕೊಳ್ಳಬಹುದಾದ ಸಮಸ್ತ ಪ್ರಕಾರ್ಯವನ್ನು ಹಿಂತೆಗೆದುಕೊಂಡು ಹೊಸದಾಗಿ ಸಂಸ್ಥೆಯ ಬೈಲಾಗಳ ಅನ್ವಯ ನೇಮಕಾತಿ ಮಾಡಲು ಪ್ರಕಾರ್ಯವನ್ನು ಪ್ರಾರಂಭಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ದಿನಾಂಕ 29-8-1997ರಂದು ನಡೆಯಲಿರುವ ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ಈ ವಿಷಯವನ್ನು ಮಂಡಿಸಿ ಸದರಿ ಕೌನ್ಸಿಲ್ ನಿರ್ಣಯದ ಅನ್ವಯ ನಿರ್ದೇಶಕರ ಹುದ್ದೆಯನ್ನು ತುಂಬಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

+ ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ): ಮಾನ್ಯ ಉಪಾಧ್ಯಕ್ಷರೆ, ಈ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಬಹುಶಃ ಇಡೀ ದೇಶದಲ್ಲಿ ಏಷ್ಯಾ ಖಂಡದಲ್ಲಿ ಪ್ರತಿಷ್ಠಿತವಾದಂಥ ಸಂಸ್ಥೆ. ನಾನು 1982-83ನೇ ಸಾಲಿನಲ್ಲಿ ಹಣಕಾಸಿನ ಸಚಿವನಾಗಿದ್ದಾಗ ಎಲ್ಲಿಯಾದರೂ ಏನಾದರೂ ಹಣ ಉಳಿದಿದ್ದರೆ ಅದಕ್ಕೆ ಕೊಡುತ್ತಿದ್ದೆ. ಮುಖ್ಯಮಂತ್ರಿಯಾಗಿದ್ದಾಗ ಕೂಡ ಎಲ್ಲಿಯಾದರೂ ಹಣ ಉಳಿದಿದ್ದರೆ ಹಣವನ್ನು ಇದಕ್ಕೆ ಹಾಕುತ್ತಿದ್ದೆ. ಜಗತ್ತಿನ ಡಬ್ಲ್ಯೂ ಹೆಚ್‌ಓ.ನವರೂ ಕೂಡ ದೆಹಲಿಗೆ ಯಾರಾದರೂ ಬಂದರೆ ಇಲ್ಲಿಗೆ ಕಳುಹಿಸುತ್ತಿದ್ದರು, ಯಾವ ತರಹ ಇದು ನಡೆಯುತ್ತಿದೆ ಎಂದು ನೋಡಿಕೊಂಡು ಬರಲು. ತಾವು ಕೊಟ್ಟಂಥ ಉತ್ತರವನ್ನು ನೋಡಿದರೆ ತಾವು ಅದನ್ನು ಕ್ಯಾಷುಯಲ್ಲಾಗಿ ಟ್ರೀಟ್ ಮಾಡಿದ್ದೀರಿ, ಅದನ್ನು ಬಹಳ ಗಂಭೀರವಾಗಿ ಅದನ್ನು ತೆಗೆದುಕೊಂಡಿಲ್ಲ ಎಂದು ಬಹಳ ಬೇಸರದಿಂದ ಹೇಳಬೇಕಾಗುತ್ತದೆ. ಏಕೆಂದರೆ ಈ ಪ್ರತಿಷ್ಠಿತ ಸಂಸ್ಥೆಯಲ್ಲಿ ನಿರ್ದೇಶಕರ ಹುದ್ದೆ ಇಲ್ಲ. ಅಲ್ಲಿ ಮೈಕ್ರೋಬಯೋಲಾಜಿ ಪಾಸ್ ಆದಂಥವರು ಸೂಪರಿಂಟೆಂಡೆಂಟ್ ಆಗಿದ್ದಾರೆ, ಅವರಿಗೆ ಕ್ಯಾನ್ಸರ್ ಎಂದರೇನು ಎಂಬುದು ಗೊತ್ತಿಲ್ಲ. ಮೆಡಿಕಲ್ ಎಜುಕೇಷನ್ ನಿರ್ದೇಶಕರನ್ನು ಇನ್‌ಚಾರ್ಜ್ ಡೈರೆಕ್ಟರ್ ಎಂದು ನೇಮಕ ಮಾಡಿದ್ದೀರಿ. ಅವರು ವಾರಕ್ಕೆ ಒಮ್ಮೆ ಕೂಡ ಇಲ್ಲಿ ಭೇಟಿ ಕೊಡುತ್ತಿಲ್ಲ. ಈಗ ಒಂದು ವರ್ಷದಿಂದ ಎಷ್ಟೋ ತಜ್ಞ ವೈದ್ಯರು, ಅದರಲ್ಲಿಯೂ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್‌ನವರು ಬಿಟ್ಟುಹೋದರು. ಒಂದು ಖಾಸಗಿ ಸಂಸ್ಥೆ ಬೆಳೆಯುತ್ತಿದೆ ಅಲ್ಲಿಗೆ ಹೋಗುತ್ತಿದ್ದಾರೆ. ಅದೂ ಕೂಡ ಬೆಳೆಯಲಿ ಅದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಅಲ್ಲಿನ ತಜ್ಞ ವೈದ್ಯರು ಅಲ್ಲಿಗೆ, ಮಿಡ್ಲ್‌ಈಸ್ಟಗೆ ಅಮೇರಿಕಾಕ್ಕೆ ಹೀಗೆ ಎಲ್ಲರೂ ವಲಸೆ ಹೋಗುತ್ತಿದ್ದಾರೆ. ಅಲ್ಲಿ ಎರಡು ವರ್ಷದಿಂದ ಎಷ್ಟು ತಜ್ಞ ವೈದ್ಯರು ಬಿಟ್ಟುಹೋಗಿದ್ದಾರೆ ಎಂದು ಪಟ್ಟಿಯನ್ನು ದಯಮಾಡಿ ಕೊಡಿ. ಇದು ಒಂದು ಸರ್ಕಾರಿ ಸಂಸ್ಥೆ, ಬಡವರಿಗೆ ಬಹಳ

ಹತ್ತಿರವಾದಂಥ ಒಂದು ಸಂಸ್ಥೆಯೆಂದು ಸಂಬಳ ಕಡಿಮೆಯಾದರೂ ಬಹಳ ಡೆಡಿಕೇಷನ್‌ದಿಂದ ಅವರು ಕೆಲಸ ಮಾಡುತ್ತಿದ್ದರು. ಆದರೆ ಇವೊತ್ತು ಅಲ್ಲಿ ಜಾಬ್ ಸ್ಯಾಟಿಸ್‌ಫ್ಯಾಕ್ಷನ್ ಇಲ್ಲ, ಸುಮಾರು ಒಂದು ವರ್ಷದಿಂದ ಧರ್ಮಶಾಲೆ ನಿಂತು ಹೋಗಿದೆ. ಎಂಟುನೂರು ಜನರಿಗೆ ಬೇಕಾದಂಥ ಕ್ಯಾಂಟೀನ್ ನಿಂತು ಹೋಗಿದೆ. ಆಗ ಸುಮಾರು ಮೂರು-ಮೂರೂವರೆ ಕೋಟಿ ರೂಪಾಯಿ ಕೊಟ್ಟು ತಂದಂಥ ಕೋಬಾಲ್ಟ್ ಮೆಷಿನ್, ಒಂದು ವರ್ಷದ ಹಿಂದೆ ಕಮಿಷನ್ ಆಗಬೇಕಾಗಿತ್ತು. ಅದು ಕಮಿಷನ್ ಆಗಿಲ್ಲ. the manner in which the reply is given, it is very unusual ಇದರಿಂದ ಬಹಳ ದುಃಖ ಆಗುತ್ತಿದೆ. ಏಕೆಂದರೆ ಬಡವರಿಗೆ ಕಡಿಮೆ ಖರ್ಚಿನಲ್ಲಿ ಅನುಕೂಲ ಆಗಲಿ ಎಂದು ಜಿಲ್ಲಾ ಮಟ್ಟದಲ್ಲಿ ಒಂದು ರೆಫರಲ್ಸ್ ಸೆಂಟರ್ ಮಾಡಿ, ಪ್ರತಿ ಜಿಲ್ಲೆನಲ್ಲೂ ಕೂಡ ಇಂತಹ ರೆಫರಲ್ಸ್ ಸೆಂಟರ್ ಮಾಡಿ, ಬಡವರಿಗೆ ಅನುಕೂಲ ಆಗಲಿ ನಂತರ ಅವರು ಇಲ್ಲಿ ಬರಲಿ ಎಂದು ಮಾಡಿದ್ದೇವೆ. ಆದರೆ ಎಷ್ಟು ಸಲ ನೀವು ಗವರ್ನಿಂಗ್ ಕೌನ್ಸಿಲ್ ಮೀಟಿಂಗ್ ಕರೆದಿದ್ದೀರಿ? ನನಗೆ ಮುಖ್ಯಮಂತ್ರಿಯವರಿಂದ ಉತ್ತರ ಬೇಕಾಗಿತ್ತು. ನಾನು ಆ ನಿರೀಕ್ಷಯಿಂದ ಇದನ್ನು ಕಳುಹಿಸಿದ್ದೆ. ಈ ತರಹ ಪ್ರತಿಷ್ಠಿತ ಸಂಸ್ಥೆಯಲ್ಲಿ ಇವೊತ್ತು ಮುಖ್ಯಸ್ಥರಿಲ್ಲ, ನನಗೆ ಗೊತ್ತಿದ್ದ ಪ್ರಕಾರ ಹತ್ತು-ಹನ್ನೆರಡು ಮಂದಿ ತಜ್ಞ ವೈದ್ಯರು ಬಿಟ್ಟುಹೋಗಿದ್ದಾರೆ. ಇದು ಸರ್ಕಾರದ ಮರ್ಯಾದೆಯ ಪ್ರಶ್ನೆ, ಸರ್ಕಾರದ ಪ್ರತಿಷ್ಠೆಯ ಪ್ರಶ್ನೆ. ಆದ್ದರಿಂದ ತಾವು ತಕ್ಷಣ ಮುಖ್ಯಮಂತ್ರಿಯವರನ್ನು ಕರೆದುಕೊಂಡು ಹೋಗಿ ಭೇಟಿ ನೀಡಿ. ಅಲ್ಲಿ ಹೋಗಿ ಕುಳಿತುಕೊಂಡು ಏನು ಸಮಸ್ಯೆ ಇದೆ ಎಂದು ತಿಳಿದುಕೊಳ್ಳಬೇಕು. ಏಕೆಂದರೆ ಪುನಃ ನೀವು ಆ ಸಂಸ್ಥೆಯನ್ನು ಕಟ್ಟಬೇಕು. ಬಡವರಿಗಾಗಿ ಅದೊಂದೇ ಸಂಸ್ಥೆ ಇರತಕ್ಕಂಥದ್ದು. ಇಲ್ಲದಿದ್ದರೆ ಆ ಬಡವರು ಲಕ್ಷಾಂತರ ರೂಪಾಯಿಯನ್ನು ಖರ್ಚು ಮಾಡಿ ಎಲ್ಲಿ ಹೋಗಬೇಕು? ಇವೊತ್ತು ಬಂದಂಥ ಬಡವರಿಗೆ ನಿರಾಶೆಯಾಗುತ್ತಿದೆ. ಅವರಲ್ಲಿ ಕೆಲವರು ನಮ್ಮ ಮನೆಗೆ ಬಂದರು ಅವರು ನೋಡಿ ಅಲ್ಲಿ ಯಾವ ಆಶ್ರಯ ಕೂಡ ಇಲ್ಲ, ನಮಗೆ ಯಾವುದೇ ರೀತಿಯ ಚಿಕಿತ್ಸೆ ಸಿಗುತ್ತಿಲ್ಲ, ನೋಡಿ ಕರ್ನಾಟಕದ ಒಂದು ಪ್ರತಿಷ್ಠಿತ ಸಂಸ್ಥೆ ಹೀಗಾಗಿದೆ ಎಂದು ಅನೇಕ ಜನ ಇವೊತ್ತು ನನಗೆ ಬಂದು ಕಂಪ್ಲೇಂಟ್ ಮಾಡಿದ್ದಾರೆ. ಅದನ್ನು ಕೇಳಿ ನನಗೆ ದುಃಖವಾಯಿತು. ನಮ್ಮ ಕರ್ನಾಟಕದ ಎಂತಹ ಪ್ರತಿಷ್ಠಿತ ಸಂಸ್ಥೆ ಎಷ್ಟು ಜನ ಅಲ್ಲಿ ಬರುತ್ತಿದ್ದರು ಹೀಗಾಯಿತಲ್ಲ ಎಂದು ದುಃಖವಾಯಿತು. ನಾನು ಮೊನ್ನೆ ಹೀಗೆ ಅಲ್ಲಿ ಹೋಗಿದ್ದೆ ಅಲ್ಲಿ ಜನವೇ ಇಲ್ಲ. ಏಕೆಂದರೆ ಒಂದು ಆಕರ್ಷಣೆ ಇಲ್ಲ. ನಿಮ್ಮ ದೃಷ್ಟಿಯಲ್ಲಿ ಕರ್ನಾಟಕದಲ್ಲಿ ಕ್ಯಾನ್ಸರ್ ನಿರ್ಮೂಲನ ಆಗಿದೆ ಆದಕಾರಣ ಪೇಷಂಟ್ಸ್ ಬರುತ್ತಿಲ್ಲ ಎಂದು ನಾಳೆ ಒಂದು ವರದಿ ನಿಮ್ಮಿಂದ ಬಂದರೆ ಬರಬಹುದು. ನಮಗೂ ನಿಮಗೂ ಗೊತ್ತಿದೆ ಕೆಲವೊಂದು ಶಾಲೆಯಲ್ಲಿ ಐನೂರು ಮಕ್ಕಳು ಇರುತ್ತಾರೆ. ಆದರೆ ಕೊನೆಗೆ ಐವತ್ತು ಮಕ್ಕಳೂ ಕೂಡ ಉಳಿಯುವುದಿಲ್ಲ. ಆದರೆ ಆಗ ಮಕ್ಕಳು ಶಾಲೆಗೆ ಬರುತ್ತಾ ಇಲ್ಲ ಎಂದು ಹೇಳುತ್ತಾರೆ ಹೊರತಾಗಿ ಮೇಷ್ಟ್ರು ಸರಿ ಇಲ್ಲ ಅವರ ಬೇಜವಾಬ್ದಾರಿಯಿಂದ ಬರ್ತಾ ಇಲ್ಲ ಎಂದು

ಹೇಳುವುದಿಲ್ಲ. ಆ ಪರಿಸ್ಥಿತಿ ಈ ಒಂದು ಪ್ರತಿಷ್ಠಿತ ಸಂಸ್ಥೆಗೆ ಆಗಿದೆ. ತಕ್ಷಣ ತಾವು ಒಂದು ವಾರದ ಒಳಗೆ please visit that institute. Sometimes it happens. ಅದು ಏನೂ ಇಲ್ಲದೆ ಇಂತಹ ಒಂದು ದುರಂತಕ್ಕೆ ಈ ಪ್ರತಿಷ್ಠಿತ ಸಂಸ್ಥೆ ಬಂದಿದೆ. ಆದ್ದರಿಂದ ನೀವು ಕೊಟ್ಟಂಥ ಉತ್ತರ ನೋಡಿ ನನಗೆ ಬಹಳ ವಿಷಾದ ಅನಿಸುತ್ತಿದೆ. ಈ ಡ್ರಾಫ್ಟ್ ನೀವು ಮಾಡುವುದಿಲ್ಲ, ಆದರೆ ಅಧಿಕಾರಿಗಳು ಮಾಡುತ್ತಾರೆ ಆ ಅಧಿಕಾರಿಗಳಿಗೆ ಒಂದು ಕನ್ಸರ್ನ್ ಇಲ್ಲ They have absolutely no concern for the Institution ಆದಕಾರಣ ಒಂದು ವಾರದೊಳಗೆ ಏನೇನಾಗಿದೆ ಅದನ್ನೆಲ್ಲಾ ವ್ಯವಸ್ಥೆ ಮಾಡಿ. ಒಂದು ವೇಳೆ ನಿಮಗೆ ಹೊಸ ನಿರ್ದೇಶಕರನ್ನು ತರಲಿಕ್ಕೆ ಆಗದಿದ್ದರೆ ಯಾರಾದರೊಬ್ಬರನ್ನು ಇನ್‌ಚಾರ್ಜ್ ಕೊಡಿ. You could have as well continued that old Director ಯ್ಯಾರನ್ನಾದರೂ ಹಾಕಿದರೆ ಪ್ರಯೋಜನವಿಲ್ಲ. ನೀವು ಡೈರೆಕ್ಟರ್ ಮೆಡಿಕಲ್ ಎಜ್ಯುಕೇಶನ್ ನವರಿಗೆ ಹಾಕಿದ್ದೀರಿ, ಅವರಿಗೇನು ಗೊತ್ತಿದೆ ಅಲ್ಲಿ.? ದಯಮಾಡಿ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಮುಖ್ಯಮಂತ್ರಿಯವರನ್ನು ನೀವು ನಾಳೆ ನಾಡಿದ್ದೇ ಕರೆದುಕೊಂಡು ಹೋಗಿ, ಬರೀ ನೀವು ಹೋದರೆ ಪ್ರಯೋಜನವಿಲ್ಲ. ಮುಖ್ಯಮಂತ್ರಿಯವರು ಆ ಸಂಸ್ಥೆಯ ಚೇರ್ಮನ್ ಆಗಿದ್ದಾರೆ. ಅವರಿಗೆ ಅಲ್ಲಿ ಎರಡು ಗಂಟೆಗಳ ಕಾಲ ಕರೆದುಕೊಂಡು ಹೋಗಿ ಅದಕ್ಕೆ ಹಣ ಬೇಕಾದರೆ ಹಣ ಕೊಡಿಸಿ ಮತ್ತು ಇನ್ನು ಏನು ವ್ಯವಸ್ಥೆ ಮಾಡಬೇಕೊ ಅದನ್ನು ಮಾಡಿ, ಅದನ್ನು ಮಾಡದಿದ್ದರೆ ಬಹುಶಃ ಈ ಜನರ ಶಾಪಕ್ಕೆ ನಿಮ್ಮ ಸರ್ಕಾರ ಗುರಿಯಾಗುತ್ತದೆ. ದಯಮಾಡಿ ಕ್ಷಮಿಸಿ ಈ ಮಾತನ್ನು ನಾನು ಕಟುವಾಗಲೇ ಹೇಳಬೇಕಾಗುತ್ತದೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೆ, ನಾನು ಆಸ್ಪತ್ರೆಗೆ ಭೇಟಿ ಕೊಟ್ಟಿದ್ದೇನೆ. ಇವೊತ್ತು ಹೇಳುವಂಥ ವಿಚಾರ ಏನು ಎಂದರೆ....

ಉಪಾಧ್ಯಕ್ಷರು: ಮೊಯಿಲಿಯವರು ಹೇಳದೇ ಇದ್ದಂಥ ವಿಚಾರವನ್ನು ಮಾತ್ರ ಹೇಳಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಅವರು ಹೇಳದೇ ಇದ್ದ ವಿಚಾರವನ್ನೇ ಹೇಳುತ್ತಿದ್ದೇನೆ. ಇಡೀ ರಾಜ್ಯದಲ್ಲಿದ್ದ ಕ್ಯಾನ್ಸರ್ ರೋಗಿಗಳಿಗೆ ಆ ಆಸ್ಪತ್ರೆ ಬಿಟ್ಟರೆ ಮತ್ತೊಂದಿಲ್ಲ. ವೈದ್ಯರ ಕೊರತೆ ಇರುವುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ನಿರ್ದೇಶಕರಿಗೆ ನೇಮಿಸುವುಂಥದ್ದರ ಬಗ್ಗೆ ನ್ಯಾಯಾಲಯದ ತೀರ್ಪಿನಂತೆ ಅವರು ಏನು ಬೇಕಾದರೂ ಮಾಡಲಿ, ಆದರೆ ಆ ವೈದ್ಯರು ರೋಗಿಗಳನ್ನು ನೋಡುಂಥದ್ದರ ಬಗ್ಗೆ ಆಸಕ್ತಿ ಸರ್ಕಾರಕ್ಕೆ ಇರಬೇಕಲ್ಲಾ. ಉದಾಹರಣೆಗೆ ಬ್ರೇನ್ ಟ್ಯೂಮರ್‌ಗೆ ಉತ್ತಮವಾಗಿ ಚಿಕಿತ್ಸೆ ಮಾಡುವಂಥ ಒಬ್ಬರೇ ಒಬ್ಬರು ಆ ಆಸ್ಪತ್ರೆಯಲ್ಲಿದ್ದಾರೆ. ಅವರ ಮೇಲೆ ಯಾವ ರೀತಿ ಹೊರೆಯಾಗಿದೆ ಎಂದರೆ ಶೂನ್ಯ ವೇಳೆಯಲ್ಲಿ ನಮ್ಮ ಸದಸ್ಯರೆಲ್ಲರೂ ತಮ್ಮ ಮೇಲೆ ಯಾವ ರೀತಿ ಹೊರೆ ಹಾಕುತ್ತಾರೆ ಆ ರೀತಿ ಹೊರೆ ಅವರ ಮೇಲಿದೆ. ಮತ್ತೆ ವಿದ್ಯಾಭ್ಯಾಸ ಮಾಡಿ

ರೋಗಿಗಳ ಸೇವೆ ಮಾಡುವಂಥ ಸಂದರ್ಭದಲ್ಲಿ, ಅಂತಹ ವೈದ್ಯರು ನಮ್ಮ ದೇಶವನ್ನು ಬಿಟ್ಟು ಇತರೇ ದೇಶಗಳಲ್ಲಿ ಸೇವೆ ಮಾಡಲು ಹೋಗುತ್ತಿರುವುದರ ಬಗ್ಗೆ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಆದಕಾರಣ ಸರ್ಕಾರ ಇದರ ಬಗ್ಗೆ ಗಮನಕೊಡಬೇಕು. ಅದರ ಜೊತೆಗೆ ಅಲ್ಲಿಯ ಕಾರ್ಮಿಕರು ಒಂದು ದಿವಸ ಮುಷ್ಕರವನ್ನು ಮಾಡಿದ್ದರು, ಅಲ್ಲಿಯ ಸ್ಥಳೀಯ ಶಾಸಕರಾದ ಶ್ರೀ ರಾಮಲಿಂಗರೆಡ್ಡಿಯವರು ಮಧ್ಯ ಪ್ರವೇಶ ಮಾಡಿ, ಇತ್ಯರ್ಥ ಮಾಡಿ ನಿಲ್ಲಿಸಿದರು. ಆದರೆ ನಿನ್ನೆ ಮತ್ತೆ ಆ ಮುಷ್ಕರ ಪ್ರಾರಂಭವಾಗಿದೆ. ಅದರ ಬಗ್ಗೆ ಸರ್ಕಾರ ಏನು ಆಲೋಚನೆ ಮಾಡಿದೆ. ಏಕೆಂದರೆ ಇದು ಬಹಳ ಕೆಟ್ಟ ರೋಗ ಆಗಿರುವುದರಿಂದ ರೋಗಿಗಳಿಗೆ ಹಾಗೂ ಅವರ ಕುಟುಂಬ ವರ್ಗದವರಿಗೆ ಬಹಳ ಅನಾನುಕೂಲವಾಗುತ್ತಿದೆ ಆದಕಾರಣ ಸರ್ಕಾರ ತುರ್ತಾಗಿ ಅದರ ಬಗ್ಗೆ ಕ್ರಮವನ್ನು ಜರುಗಿಸಬೇಕೆಂದು ಸರ್ಕಾರವನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಲಿಂಗರೆಡ್ಡಿ (ಜಯನಗರ): ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಒಂದನೇ ತಾರೀಖಿನಿಂದ ಅಲ್ಲಿ ಮುಷ್ಕರ ಪ್ರಾರಂಭವಾಗಿದೆ. ಅವರ ಬೇಡಿಕೆಯ ಮುಖ್ಯ ಉದ್ದೇಶ ಏನು ಎಂದರೆ ಅಲ್ಲಿ ರೆಗ್ಯುಲರ್ ಡೈರೆಕ್ಟರ್ ಬೇಕು ಹಾಗೂ ಸುಮಾರು ಒಂದು ವರ್ಷದಿಂದ ಅಲ್ಲಿ ಗವರ್ನಿಂಗ್ ಕೌನ್ಸಿಲ್ ಮೀಟಿಂಗ್ ಕರೆದಿಲ್ಲ. ಮತ್ತೇ ಅಲ್ಲಿಎಂಟನೂರು ಜನ ಸಿಬ್ಬಂದಿ ವರ್ಗ ಇದೆ, ಅವರಿಗೆ ಇರುವಂತ ಕ್ಯಾಂಟಿನನ್ನು ಸುಮಾರು ನಾಲ್ಕುತಿಂಗಳುಗಳಿಂದ ಮುಚ್ಚಿಬಿಟ್ಟಿದ್ದಾರೆ. ಅಲ್ಲಿ ಬರತಕ್ಕಂಥ ರೋಗಿಗಳಿಗೆ ಸಂಬಂಧಿಸಿದವರು ಒಂದು ಕಾಫಿ ಕುಡಿಯಬೇಕಾದರೆ, ಒಂದು ಇಡ್ಲಿ ತಿನ್ನಬೇಕಾದರೂ ಸುಮಾರು ಒಂದು ಕಿ.ಮಿ. ದೂರ ಹೋಗಬೇಕು, ಊಟ ಮಾಡಬೇಕಾದರೂ ದೂರ ಹೋಗಬೇಕು. ಅಲ್ಲಿ ಕ್ಯಾಂಟಿನ್ ಇಲ್ಲ. ಹಾಗಾಗಿ ಅಲ್ಲಿರುವ ಕಾರ್ಮಿಕರಿಗೆ, ರೋಗಿಗಳಿಗೆ ಹಾಗೂ ರೋಗಿಗಳ ಜೊತೆ ಇರುವ ಕುಟುಂಬ ವರ್ಗದವರಿಗೆ ಕ್ಯಾಂಟಿನ್ ಇಲ್ಲದೇ ತುಂಬಾ ತೊಂದರೆಯಾಗಿದೆ. ಇನ್ನೂ ಕಾರ್ಮಿಕರ ಸಮಸ್ಯೆಗಳು ಇವೆ. ಆದರೆ ಅವುಗಳನ್ನೆಲ್ಲಾ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಡೆರೆಕ್ಟರ್ ಇಲ್ಲದೆ ಬಹಳ ತೊಂದರೆಯಾಗಿದೆ. ಮೆಡಿಕಲ್ ಎಜ್ಯುಕೇಷನ್ ನಿರ್ದೇಶಕರನ್ನು ತೆಗೆದುಕೊಂಡು ಹೋಗಿ ಇನ್‌ಚಾರ್ಜ್ ಹಾಕಿದ್ದಾರೆ. ಮತ್ತು ಅಲ್ಲಿರುವ ಮೆಡಿಕಲ್ ಸೂಪರಿಂಟೆಂಡೆಂಟ್ ಇದ್ದಂಥವರು ಕ್ಯಾನ್ಸರ್ ವಿಚಾರವನ್ನು ಓದೇ ಇಲ್ಲ, ಆ ಇಬ್ಬರು ಜವಾಬ್ದಾರಿ ಇರತಕ್ಕಂಥವರು, ಆದರೆ ಅವರು ಇಂಟ್ರೆಸ್ಟ್ ತೆಗೆದುಕೊಳ್ಳುತ್ತಿಲ್ಲ, ಅಲ್ಲಿ ಎಲ್ಲಾ ಡಾಕ್ಟರ್ಸ್ ಬಿಟ್ಟು ಹೋಗುತ್ತಿದ್ದಾರೆ. ಇನ್ನು ಆರು ತಿಂಗಳು ವರ್ಷ ಬಿಟ್ಟರೆ ಅಲ್ಲಿ ಉಳಿದಿರತಕ್ಕಂಥ ಎಲ್ಲಾ ಡಾಕ್ಟರ್ಸ್ ಬಿಟ್ಟುಹೋಗುತ್ತಾರೆ.

ಡಾ: ಹೆಚ್.ಸಿ.ಮಹಾದೇವಪ್ಪ: ಸನ್ಮಾನ್ಯ ಉಪಾಧ್ಯಕ್ಷರೆ, ಮಾಜಿ ಮುಖ್ಯಮಂತ್ರಿಗಳಾದಂಥ ಮಾನ್ಯ ವೀರಪ್ಪ ಮೊಯಿಲಿಯವರು ಬಹಳ ತೀಕ್ಷ್ಣವಾಗಿ, ಬಹಳ ಆಳವಾಗಿ ಕಾಳಜಿಯನ್ನು ವ್ಯಕ್ತ ಮಾಡಿದ್ದಾರೆ. ಅದರ ಬಗ್ಗೆ ನನ್ನದೂ ಸಹಮತ ಇದೆ. ಯಾವುದೇ ಸ್ವಾಯತ್ತ ಸಂಸ್ಥೆ ಉತ್ತಮವಾಗಿ ಸೇವೆಯನ್ನು ಮಾಡಬೇಕು, ಅದಕ್ಕೆ

ಬೇಕಾದಂಥ ಸಿಬ್ಬಂದಿಯನ್ನು ಕಲ್ಪಿಸಬೇಕು, ಅದಕ್ಕೆ ತೀವ್ರವಾದಂಥ ವ್ಯವಸ್ಥೆಯನ್ನು ಮಾಡಬೇಕು, ಅದನ್ನು ನಮ್ಮದೇ ಸರ್ಕಾರ ಇರಲಿ, ಯಾವುದೇ ಸರ್ಕಾರ ಇರಲಿ ಅದನ್ನು ಮಾಡಬೇಕಾದಂಥ ಉದ್ದೇಶ ಇದರಲ್ಲಿ ಅಡಕವಾಗಿದೆ. ಇದರಲ್ಲಿ ಪಕ್ಷಪಾತ ಮಾಡಬೇಕು, ಇದನ್ನು ಲಘುವಾಗಿ ತೆಗೆದುಕೊಳ್ಳಬೇಕೆಂದು ಯಾವುದೇ ರೀತಿಯ ದುರುದ್ದೇಶ ಇಲ್ಲ. ಏಷ್ಯಾ ಖಂಡದಲ್ಲಿ ಇರತಕ್ಕಂಥ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಅತ್ಯಂತ ಪ್ರತಿಷ್ಠಿತ ಕ್ಯಾನ್ಸರ್ ಸಂಸ್ಥೆ ಎಂದರೆ ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್‌ಸಂಸ್ಥೆ. ಈಗಲೂ ಕೂಡ ವಿಚಾರ ತಿಳಿಯಲಿಕ್ಕೆ, ಅಧ್ಯಯನ ಮಾಡಲಿಕ್ಕೆ ಈ ಸಂಸ್ಥೆಗೆ ಹೊರದೇಶದಿಂದ ಬರುತ್ತಿದ್ದಾರೆ. ಇಷ್ಟೆಲ್ಲಾ ವಿವಾದಗಳನ್ನು ಸೃಷ್ಟಿ ಮಾಡಲಿಕ್ಕೆ ಕಾರಣ ಅಲ್ಲಿರತಕ್ಕಂಥ ಆಂತರಿಕ ಭಿನ್ನಾಭಿಪ್ರಾಯಗಳು ಹಾಗೂ ಗುಂಪುಗಾರಿಕೆಗಳು. ಅಲ್ಲಿ ರೋಗಿಗಳು ಈಗಲೂ ಕೂಡ ಇದ್ದಾರೆ, ಅಲ್ಲಿ ಧರ್ಮ ಶಾಲೆ ಇದೆ ಅಲ್ಲಿ ಬೆಳಿಗ್ಗೆ ಬ್ರೇಕ್‌ಫಾಸ್ಟ್ ಕೊಡತಕ್ಕಂಥ ವ್ಯವಸ್ಥೆ ಕೂಡ ಇದೆ. ಆದರೆ ಗವರ್ನಿಂಗ್ ಕೌನ್ಸಿಲ್ ಮೀಟಿಂಗ್ ಕರೆಯತಕ್ಕಂಥದ್ದು ಸ್ವಲ್ಪ ತಡವಾಗಿದೆ. ಅದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಮೊನ್ನೆ ತಕ್ಷಣ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ 29ನೇ ತಾರೀಖು ಗವರ್ನಿಂಗ್ ಕೌನ್ಸಿಲ್ ಮೀಟಿಂಗನ್ನು ಫಿಕ್ಸ್ ಮಾಡಿದ್ದೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ: ಆ ಮೀಟಿಂಗನ್ನು ಅಲ್ಲೇ ಕರಿಯಿರಿ.

ಡಾ: ಹೆಚ್.ಸಿ.ಮಹದೇವಪ್ಪ: ಖಿದ್ವಾಗಿ ನಾನು ಅಲ್ಲಿ ಭೇಟಿ ಕೊಟ್ಟು ನಾಲ್ಕು ಗಂಟೆಗಳ ಕಾಲ ಕುಳಿತು ಪ್ರತಿ ಇಂಚು ಇಂಚನ್ನು ಅಧ್ಯಯನ ಮಾಡಿ, ಅಲ್ಲಿ ಏನೇನು ನಡೆಯುತ್ತಿದೆ ಎಂಬುದರ ಬಗ್ಗೆ ನಾನು ಸ್ವತಃ ನನ್ನ ಕೈನಲ್ಲಿ ಬರೆದುಕೊಂಡು ಸುಧಾರಣೆ ಮಾಡಲು ಪ್ರಯತ್ನ ಮಾಡಿದ್ದೇನೆ. ಇನ್ನು ಗಾಮಾ ಮಾಡಲಿಕ್ಕೆ ಸ್ಕ್ಯಾನಿಂಗ್ ಬೇಕು ಅದಕ್ಕೆ ಎಫ್.ಸಿ. ಅನುಮತಿ ಕೊಟ್ಟಿದ್ದಾರೆ ಅದನ್ನೂ ಕೂಡ ಮಾಡುತ್ತೇವೆ. ಕಿದ್ವಾಯಿ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕಂಥ ವೈದ್ಯರು ಬೇರೆ ಕಡೆ ಪ್ರ್ಯಾಕ್ಟೀಸ್ ಮಾಡಬಾರದು ಎನ್ನತಕ್ಕಂಥ ನಿಬಂಧನೆ ಇದೆ. ಈ ರೀತಿ ಪ್ರ್ಯಾಕ್ಟಿಸ್ ಮಾಡುತ್ತಿರಕ್ಕಂಥವರ ಮೇಲೆ ಕ್ರಮ ತೆಗೆದುಕೊಂಡಾಗ ಈ ರೀತಿಯ ಪ್ರತಿರೋಧಕ ಭಾವನೆಗಳನ್ನು ವ್ಯಕ್ತ ಮಾಡಿ ಆ ಸಂಸ್ಥೆಯ ಹೆಸರು ಕೆಡಿಸತಕ್ಕಂಥ ಪ್ರಯತ್ನ ಕೂಡ ನಡೆಯುತ್ತಿದೆ. ಬೇರೆ ಕಡೆ ನಡೆದ ರೀತಿ ಇಲ್ಲೂ ಕೂಡ ಆಗಿದೆ, ಆಗಲೂ ಬಹುದು; ಆಗುತ್ತಿದೆ. ಅದನ್ನು ತಡೆಯಲಿಕ್ಕೆ ಕಷ್ಟ ಇದೆ. ಎರಡು ಕಾಲಿನಲ್ಲಿ ಒಂದು ಕಾಲು ಅಲ್ಲಿ, ಇನ್ನೊಂದು ಕಾಲನ್ನು ಇಲ್ಲಿ ಇಡುವುದಕ್ಕೆ ಸಾಧ್ಯವಿಲ್ಲ. ಆದಕಾರಣ ಇಲ್ಲಿ ಕೆಲಸ ಮಾಡಬೇಕಾದರೆ ಮಾಡಬೇಕು ಇಲ್ಲವೆಂದರೆ ಬಿಟ್ಟುಹೋಗಬೇಕು ಎನ್ನತಕ್ಕಂಥದ್ದು ಆಗಿದೆ. ಮೊನ್ನೆ ಸ್ಟ್ರೈಕ್ ನಡೆದಾಗ ಮಾನ್ಯ ರಾಮಲಿಂಗರೆಡ್ಡಿಯವರು ಅಲ್ಲಿಗೆ ಹೋಗಿ ಪರಿಸ್ಥಿತಿಯನ್ನು ಡೆಫ್ಯೂಸ್ ಮಾಡಿದ್ದಾರೆ. ಅದಕ್ಕೆ ನನ್ನ ಅಭಿನಂದನೆಗಳನ್ನು ಹೇಳುತ್ತೇನೆ. ಇವೊತ್ತು ಬೆಳಿಗ್ಗೆ ಹಾಗೂ ಮೂರು ಗಂಟೆಯ ವೇಳೆಗೆ ಎರಡು ಮೂರು ಸಾವಿರ ಜನರನ್ನು ಆಚೆಗೆ ಕರೆದುಕೊಂಡು ಬಂದಿದ್ದರು. ನಾನು ಒಂದು ಗಂಟೆಯ ಕಾಲ ಎಲ್ಲಾ ವೈದ್ಯರನ್ನು ವಿವಿಧ ವರ್ಗದವರನ್ನು,

ನೌಕರರನ್ನು ಚರ್ಚೆ ಮಾಡಿ 29ನೇ ತಾರೀಖು ಗೌರ್ನಿಂಗ್ ಕೌನ್ಸಿಲ್ ಕರೆದಿದ್ದೇವೆ ಎಂದು ಹೇಳಿದಾಗ ಅವರೆಲ್ಲ ಕೆಲಸಕ್ಕೆ ಹೋಗಿದ್ದಾರೆ. ಕಾನೂನಿನ ಚೌಕಟ್ಟಿನಲ್ಲಿ ಏನೇನು ಸಹಾಯ ಮಾಡಲಿಕ್ಕೆ ಸಾಧ್ಯವಿದೆ, ಅದನ್ನು ಮಾಡಿ. ಈ ಸಂಸ್ಥೆಗೆ ಸೇವಾ ಭಾವನೆಯಲ್ಲಿ ಮೆರಗು ಕೊಡುವ ರೀತಿಯಲ್ಲಿ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂಬುದನ್ನು ವಿವರಿಸಿ ವಿವೇಚನೆ ಹೇಳಿದ್ದೇನೆ. ಇದು ಲೇಬರ್ ಆರ್ಗನೈಸೇಷನ್ ಅಲ್ಲ, ಇದು ವೈದ್ಯಕೀಯ ಸೇವೆಗೆ ಇಟ್ಟರತಕ್ಕಂಥ ಒಂದು ಪ್ರತಿಷ್ಠಿತ ಸಂಸ್ಥೆ ಎಂದು ವೈದ್ಯರಿಗೆ ಹೇಳಿದ್ದೇನೆ. ಅಲ್ಲಿ ಅಕೆಡೆಮಿಕಲ್ ನಿಮ್ಮ ಶಕ್ತಿಯನ್ನು ಬೆಳೆಸಬೇಕು ಮತ್ತು ನಿಮ್ಮ ಸೇವೆಯನ್ನು ಕೊಡಬೇಕೆಂದು ಕೂಡ ಹೇಳಿದ್ದೇನೆ. ಅದಕ್ಕೆಲ್ಲಾ ಒಪ್ಪಿಕೊಂಡು ಅವರೆಲ್ಲಾ ಹೋಗಿದ್ದಾರೆ. ನೆನ್ನೆ ಕೂಡ ಶೂನ್ಯವೇಳೆಯಲ್ಲಿ ಈ ಪ್ರಶ್ನೆ ಬಂದಿತ್ತು, ನಾನು ಮೇಲ್ಮನೆಯಲ್ಲಿದ್ದೆ ಆದಕಾರಣ ಸನ್ಮಾನ್ಯ ಸಾರಿಗೆ ಸಚಿವರು ಉತ್ತರವನ್ನು ಕೊಟ್ಟಿದ್ದರು ಇದೇ ವಿಚಾರದಲ್ಲಿ. ಇದನ್ನು ಗಂಭೀರವಾಗಿ ಸರ್ಕಾರ ಪರಿಗಣಿಸಿದೆ. ಸಾಧ್ಯವಾದರೆ ನಾವು ಅಲ್ಲೇ ಹೋಗಿ ಗವರ್ನಿಂಗ್ ಕೌನ್ಸಿಲ್‌ನ್ನು ಮಾಡಿ ಅಲ್ಲಿರತಕ್ಕಂಥ ಲೋಪವನ್ನು ಸರಿಮಾಡಲಿಕ್ಕೆ ಕ್ರಮವನ್ನು ಕೈಗೊಳ್ಳುತ್ತೇವೆ. ಜಿ.ಸಿ.ಯನ್ನು ಕರೆದು ಕಾನೂನಿನ ಚೌಕಟ್ಟಿನಲ್ಲಿ ಹೊಸ ನಿರ್ದೇಶಕರನ್ನು ನೇಮಕ ಮಾಡಲು ನಾವು ಕ್ರಮವನ್ನು ಕೈಗೊಂಡು ಆ ಸಂಸ್ಥೆ ಉತ್ತಮ ಸೇವೆಯನ್ನು ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಈಗಾಗಲೇ ನಾವು ಗುಲಬಾರ್ಗಾ, ಮಂಡ್ಯ, ಚಿಕ್ಕಮಗಳೂರಿನಲ್ಲಿ ಮೊಬೈಲ್ ಯುನಿಟ್ಟನ್ನು ಹಾಕಿದ್ದೇವೆ ಪೆರಿಫರಲ್ ಸೆಂಟರನ್ನು ಮಾಡಿದ್ದೇವೆ. ಇಲ್ಲಿರತಕ್ಕಂಥ ನೌಕರರು ಅಲ್ಲಿ ಹೋಗಿ ಕೆಲಸ ಮಾಡಬೇಕಾಗುತ್ತದೆ, ಆದರೆ ಅದಕ್ಕೋಸ್ಕರ ಸಂಘ ಕಟ್ಟಕೊಂಡು ಚಳುವಳಿ ಮಾಡುವುದು, ಮತ್ತು ಅವರಿಗೆ ಪ್ರಾಮುಖ್ಯತೆ ಇದೆ, ನನಗೆ ಇಲ್ಲ ಎಂದು ಗುಂಪುಗಾರಿಕೆ ಮಾಡುವುದರಿಂದ ಈ ಸಂಸ್ಥೆಯ ಪ್ರತಿಷ್ಠೆ ಮತ್ತು ಘನತೆ ಕುಂದುತ್ತಿದೆ. ಆ ಕಾರಣಕ್ಕಾಗಿ ನಾನು ಅವರೆಲ್ಲರನ್ನು ಕರೆಸಿ ಒಂದೂ ಒಂದೂವರೆ ಗಂಟೆವರೆಗೆ ಮಾತನಾಡಿದ್ದೇನೆ. ಅವರೆಲ್ಲಾ ಒಪ್ಪಿಕೊಂಡು ಹೋಗಿದ್ದಾರೆ, ಆ ಪರಿಸ್ಥಿತಿಯನ್ನು ನಿವಾರಿಸಲು ಸನ್ಮಾನ್ಯ ರಾಮಲಿಂಗರೆಡ್ಡಿಯವರು ಸಹಾಯ ಮಾಡಿದ್ದಾರೆ. ಆದಕಾರಣ ಅವರಿಗೂ ಕೂಡ ಅಭಿನಂದನೆಯನ್ನು ವ್ಯಕ್ತಮಾಡಿ ಮಾನ್ಯ ಹಿರಿಯ ನಾಯಕರ ಮತ್ತು ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಂಡು ಆ ದಿಸೆಯಲ್ಲಿ ಪ್ರಯತ್ನ ಮಾಡುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ: ಒಂದು ವರ್ಷದಿಂದ ಅಲ್ಲಿ ಗವರ್ನಿಂಗ್ ಕೌನ್ಸಿಲ್ ಮೀಟಿಂಗ್ ಆಗಿರಲಿಲ್ಲ. ಅದನ್ನು ಮಾಡುತ್ತಿದ್ದಾರೆ. ಆದಕಾರಣ ಅದಕ್ಕೆ ನನ್ನ ಮೆಚ್ಚುಗೆಯನ್ನು ವ್ಯಕ್ತ ಮಾಡುತ್ತೇನೆ. ಅಲ್ಲಿ ಮುಷ್ಕರ ಮತ್ತೊಂದು ಆಗುತ್ತಿರುವುದಕ್ಕೆ ಕಾರಣವೆಂದರೆ ಅಲ್ಲಿ ಡಾಕ್ಟರ್ಸ್‌ಗೆ ಕೆಲಸ ಇಲ್ಲ. ಸಿಬ್ಬಂದಿಗೆ ಕೆಲಸ ಇಲ್ಲ ಅವರು ಮತ್ತೇನು ಮಾಡುತ್ತಾರೆ, ಒಳಜಗಳ ಒಂದು ಕೆಲಸ ಎಂದು ತಿಳಿದು ಮಾಡುತ್ತಾರೆ. ಈ ಹಿಂದೆ ಸಂಸ್ಥೆಯಲ್ಲಿ ಮುಷ್ಕರ ಮತ್ತೊಂದು ಆಗಿದ್ದಿಲ್ಲ. ಈಗ ಆಗಲು ಕಾರಣ ಎಂದರೆ ಈ

ಒಂದು ವರ್ಷದಿಂದ ಇರುವ ಅಸ್ತವ್ಯವಸ್ತದಿಂದ ಆಗಿದೆ. ನಾವು ಅಟಾನಮಸ್ ಬಾಡಿ ಏತಕ್ಕೆ ಮಾಡುತ್ತೇವೆ ಎಂದರೆ ಕೆಲವು ಸ್ವಾಯತ್ತವಾದ ನಿರ್ಣಯಗಳನ್ನು ತೆಗೆದುಕೊಳ್ಳಬಹುದು ಎಂದು. ಆ ಹಿಂದೆ ಇದ್ದಂಥ ನಿರ್ದೇಶಕರು ನನಗೆ ಸಂಬಂಧ ಇಲ್ಲ, ನನ್ನ ಜಾತಿ ಇಲ್ಲ ಏನೂ ಇಲ್ಲ, ಅವರಿಗೆ ನಾವು ನಾಲ್ಕು ವರ್ಷ ಟರ್ಮ್ ಎಂದು ಮಾಡಿದ್ದೆವು. ಆದರೆ ನೀವು ಅವರ ಟರ್ಮನ್ನು ಎರಡು ವರ್ಷಕ್ಕೆ ಮಾಡಿ ಅವರನ್ನು ಮನೆಗೆ ಕಳುಹಿಸಿದ್ದೀರಿ. ಬೇರೆ ಪರ್ಯಾಯ ವ್ಯವಸ್ಥೆಯನ್ನು ಮಾಡಿ ನೀವು ಅವರಿಗೆ ಮನೆಗೆ ಕಳುಹಿಸಬಹುದಿತ್ತು. ಆದರೆ ಅದನ್ನು ಮಾಡದೆ ಅಲ್ಲಿ ಒಂದು ವರ್ಷದಿಂದ ನಿರ್ದೇಶಕರು ಇಲ್ಲದಂತೆ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಅಲ್ಲಿ ತಜ್ಞರು ಹೋಗಿ ಬಿಟ್ಟಿದ್ದಾರೆ, ಬಾಕಿಯವರು ಅಲ್ಲಿದ್ದಾರೆ. ಅವರಿಗೆ ಏನೂ ಕೆಲಸ ಇಲ್ಲ, ಅವರೇನು ಮಾಡಬೇಕು, ಮುಷ್ಕರನೇ ಮಾಡಬೇಕಾಗುತ್ತದೆ. ಏನಾದರೊಂದು ಚಟುವಟಿಕೆ ಎಲ್ಲಾದರೂ ಆಗಬೇಕಲ್ಲಾ.

ಡಾ: ಹೆಚ್.ಸಿ.ಮಹದೇವಪ್ಪ: ಹಿರಿಯ ನಾಯಕರ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ತಾವು ಮಾಡಿದ್ದು ತೆಗೆದುಹಾಕಬೇಕೆಂಬ ದುರುದ್ದೇಶ ಯಾವುದೂ ಇಲ್ಲ. ಮತ್ತೊಂದು ಅವಧಿಗೆ ಅವರನ್ನು ಸೂಪರ್ ಆನ್ಯುವೇಷನ್‌ಗೆ ಎಕ್ಸ್‌ಟೆಂಡ್ ಮಾಡಬಾರದು ಎನ್ನತಕ್ಕಂಥದ್ದು. ಈಗ ತಾವೇ ಮಾಡಿದಂಥ ಸಂಜಯಗಾಂಧಿ ಆಸ್ಪತ್ರೆಯ ಡೈರೆಕ್ಟರ್ ಮುಂದುವರಿಯುತ್ತಿದ್ದಾರೆ. ತಾವು ಅಂದರೆ ಹಿಂದಿನ ಸರ್ಕಾರ, ಆದ್ದರಿಂದ ಆ ತರಹದ ದುರುದ್ದೇಶ ಏನೂ ಇಲ್ಲ.

ಉಪಾಧ್ಯಕ್ಷರು: ಅವರು ಹೇಳಿದ್ದು ನಾಲ್ಕು ವರ್ಷ ಇದ್ದುದನ್ನು ಎರಡು ವರ್ಷ ಮಾಡಿದ್ದೀರಿ ಎಂದು.

ಡಾ: ಹೆಚ್.ಸಿ.ಮಹದೇವಪ್ಪ: ಇಲ್ಲ ಮಾನ್ಯ ಉಪಾಧ್ಯಕ್ಷರೆ ಇಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ: ಬೇರೆ ಪರ್ಯಾಯ ವ್ಯವಸ್ಥೆಯನ್ನು ಮಾಡಿ ಬೇರೆ ನಿರ್ದೇಶಕರನ್ನು ಹಾಕಿದ್ದರೆ ಸಹಿಸಬಹುದಾಗಿತ್ತು. ಅದನ್ನು ಮಾಡದೆ, ಮೈಕ್ರೊಬಯಾಲಜಿಯ ಕ್ಯಾನ್ಸರ್ ಬಗ್ಗೆ ಏನೂ ಗೊತ್ತಿಲ್ಲದವರನ್ನು ಅಲ್ಲಿಗೆ ಹಾಕಿದರೆ, ಈ ಸಂಸ್ಥೆ ಹೇಗೆ ನಡೆಯಬೇಕು; ನೀವೇ ಆಲೋಚನೆ ಮಾಡಿ. ಉತ್ತರಕ್ಕೆ ಉತ್ತರ ಅಲ್ಲ. ನಾನು ಬರೀ ಆರ್ಗ್ಯುಮೆಂಟ್‌ಗೋಸ್ಕರ ಆರ್ಗ್ಯೂ ಮಾಡುತ್ತಿಲ್ಲ. ಆದರೆ ವಾಸ್ತವವಾಗಿ ಏನು ನಡೆಯಬೇಕು ಅದೆಲ್ಲಾ ನಡೆಯುತ್ತಿಲ್ಲಾ.

ಡಾ: ಹೆಚ್.ಸಿ.ಮಹದೇವಪ್ಪ: ಅವರ ಅವಧಿ ಮುಗಿದ ತಕ್ಷಣವೇ ಅಡ್ವರ್ಟೈಸ್ ಮಾಡಿ ಒಂದು ಪ್ರತಿಷ್ಠಿತವಾದ ಸಂಸ್ಥೆಗೆ ಉತ್ತಮವಾದ ವೈದ್ಯರು ಬರಬೇಕೆಂದು ಹೇಳಿ ರಾಷ್ಟ್ರವ್ಯಾಪ್ತ ಪ್ರಕಟಣೆ ಮಾಡಿ ಸಂದರ್ಶನ ಮಾಡಲಾಯಿತು. ಅಲ್ಲಿದ್ದ ಮೂರು ಜನ ವೈದ್ಯರು ನ್ಯಾಯಾಲಯವನ್ನು ಸಂಪರ್ಕ ಮಾಡಿ ಆ ಆರ್ಡರ್‌ಗೆ ತಡೆಯನ್ನು ಒಡ್ಡಿದ

ಮೇಲೆ ಸಹಜವಾಗಿ ನಾವು ನ್ಯಾಯಾಲಯದ ಸೂಚನೆಗಳನ್ನು ಅನುಸರಿಸಲೇಬೇಕಾಗುತ್ತದೆ. ಆ ಕಾರಣಕ್ಕಾಗಿ ಸ್ವಲ್ಪ ತಡವಾಯಿತು. ಮತ್ತೆ ಈಗ ಗವರ್ನಿಂಗ್ ಕೌನ್ಸಿಲ್ ಕೂಡ ಮಾಡುತ್ತಿದ್ದೇವೆ. ನಾನೂ ಕೂಡ ವಾದ ಮಾಡಬೇಕೆಂದು ನಿಂತಿಲ್ಲ, ಆದರೆ ಅದನ್ನು ಉತ್ತಮ ಪಡಿಸಲು ಏನೆಲ್ಲಾ ಮಾರ್ಗಗಳು ಇವೆ ಅದನ್ನೆಲ್ಲಾ ಖಂಡಿತವಾಗಿ ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಮಾಡುತ್ತದೆ ಎಂದು ಹೇಳುತ್ತೇನೆ.

(2) ಮಾಗಡಿ ತಾಲ್ಲೂಕು ಮಾಡಬಾಳ ಹೋಬಳಿ ಅವ್ವೇರಹಳ್ಳಿ ಗ್ರಾಮದ ಜಮೀನುಗಳನ್ನು ಕೈಗಾರಿಕಾ ಉದ್ದೇಶಕ್ಕಾಗಿ ಸರ್ಕಾರ ಮಂಜೂರು ಮಾಡಿರುವುದರಿಂದ ರೈತರಿಗೆ ತೊಂದರೆ

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾಗಡಿ ತಾಲ್ಲೂಕು ಮಾಡಬಾಳ್ ಹೋಬಳಿ ಅವ್ವೇರಹಳ್ಳಿ ಗ್ರಾಮದ ಜಮೀನುಗಳನ್ನು ಕೈಗಾರಿಕಾ ಉದ್ದೇಶಕ್ಕಾಗಿ ಸರ್ಕಾರ ಮಂಜೂರು ಮಾಡಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆ ಹಾಗೂ ಈ ಕೈಗಾರಿಕಾ ಘಟಕಗಳಿಂದ ಮಂಚನಬೆಲೆ ಜಲಾಶಯದಿಂದ ಮಾಗಡಿ ಟೌನ್‌ಗೆ ಒದಗಿಸುವ ಕುಡಿಯುವ ನೀರು ಕಲುಷಿತ ಹಾಗೂ ಪರಿಸರ ಮಾಲಿನ್ಯ ಉಂಟಾಗುವ ಬಗ್ಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿಯ ತೀರ್ಮಾನದಂತೆ ಮೆ: ಬಿಗ್‌ಬಾಸ್ ಅಡ್ವೆಂಚರ್ಸ್ ಹಾಲಿಡೇ ರೆಸಾರ್ಟ್ಸ್ ಲಿ. ಕಂಪನಿಯವರ ನೈಸರ್ಗಿಕ ಮತ್ತು ಕೃತಕ ಮಿನರಲ್ ವಾಟರ್ ತಯಾರಿಸಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಾಡಬಾಳ ಹೋಬಳಿಯ ಅವ್ವೇರಹಳ್ಳಿ ಗ್ರಾಮದಲ್ಲಿ 68.17 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಕಾಯ್ದೆಯನ್ವಯ ಪ್ರಾರಂಭಿಕ ಅಧಿಸೂಚನೆ ಹೊರಡಿಸಿ, ಈ ಜಮೀನಿನಲ್ಲಿ 18.17 ಎಕರೆ ಖಾಸಗೀ ಜಮೀನಾಗಿದ್ದು, ಬಾಕಿ 50 ಎಕರೆ ಜಮೀನು ಸ.ನಂ.15ರಲ್ಲಿರುವ ಸರ್ಕಾರಿ ಖರಾಬ್ ಜಮೀನಾಗಿರುತ್ತದೆ. ಸಂಬಂಧಪಟ್ಟ ರೈತರಿಗೆ ಭೂಸ್ವಾಧೀನ ಬಗ್ಗೆ ತಿಳುವಳಿಕೆ ನೋಟೀಸ್ ನೀಡಲಾಗಿದ್ದು, ಅದಕ್ಕೆ ಅವರಿದ ಆಕ್ಷೇಪಣೆಗಳು ಬಂದಿವೆ. ಇದರ ಬಗ್ಗೆ ವಿಚಾರಣೆ ನಡೆಸುತ್ತಿದ್ದು, ವಿಚಾರಣಾ ವರದಿ ಬಂದ ನಂತರ ಸರ್ಕಾರವು ಪರಿಶೀಲಿಸಿ, ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಈಗ ರೈತರ ಜಮೀನನ್ನು ಅಕ್ವೈರ್ ಮಾಡಿದ್ದೇವೆ ಬಾಕಿದು ಸರ್ಕಾರಿ ಜಮೀನು ಎಂದು ಹೇಳಿದ್ದಾರೆ. ಆ ಸರ್ಕಾರಿ ಜಮೀನಿನಲ್ಲಿ ರೈತರು ಹಲವಾರು ವರ್ಷಗಳಿಂದ ಹೊಲ ಉತ್ತುಕೊಂಡು ಬಂದಿದ್ದಾರೆ. ಮತ್ತು ಲ್ಯಾಂಡ್ ಗ್ರ್ಯಾಂಟ್ ಮುಂದೆ ಅಪರ ಫೈಲ್ ಪೆಂಡಿಂಗ್ ಇದೆ. ಇನ್ನು ಸರ್ಕಾರದಿಂದ ಮಂಚನಬೆಲೆ ಜಲಾಶಯ ಕಟ್ಟುತ್ತಿದ್ದಾರೆ. ಆದರಿಂದ ಮಾಗಡಿ ಟೌನ್‌ಗೆ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆಯಾಗುತ್ತಿದೆ. ಆದ್ದರಿಂದ ಅದಕ್ಕೆ ತೊಂದರೆಯಾಗುತ್ತಿರುವುದರಿಂದ